(SRI ANNA RAO GANAMUKHI)

and many of the teachers know Kannada. But whoever does not know Kannada, he may experience some difficulty. In order to obviate this the Government are actively considering the question of opening a training college in Dharwar in Bombay area.

Sri F. H. MOHSIN.—Is it true that the Chief Minister has promised to open an Urdu Training College in Bijapur?

Sri ANNA RAO GANAMUKHI.—I am not aware .

Sri B. D. JATTI.—Not in Bijapur, but in Bombay Karnatak area.

Sri F. H. MOHSIN.—In view of the fact that Hubli is centrally situated, would the Government consider opening the college at Hubli?

Sri ANNA RAO GANAMUKHI.—We will consider about the desirability of locating a college some where in the Bombay Karnatak area.

Sri S. D. GAONKAR.—I would like to know whether Urdu can be taught in Kannada?

Sri ANNA RAO GANAMUKHI.—It also can be done.

Sri C. K. RAJAIAH SETTY.—Are there colleges to train primary school teachers?

Sri ANNA RAO GANAMUKHI.—There are some colleges.

Sri F. H. MOHSIN.—Is it not a fact that the Education Minister, the Chief Minister and the Deputy Minister for Education have promised to open a Urdu Training College from next year only?

Sri ANNA RAO GANAMUKHI.—We have not promised any body. But the Hon'ble Member has brought to my notice the question and I am actively considering about the desirability of starting one.

Grant of fee concessions in the Middle Schools of Bellary.

Q.—1688. Sri M. M. PATIL (Hadagalli).—

Will the Government be pleased to state:—

whether they have granted fee concessions in all the Middle Schools functioning in Bellary District in accordance with the practice prevalent in the old Mysore State?

A.—Sri ANNA RAO GANAMUKHI (Minister for Education).—

No.

ಶ್ರೀ ಎಂ. ಎಂ. ಪಾಟೀಲ್.—ಆರು ವರ್ಷಗಳ ಆಗಾಯ್ತು, ಇದನ್ನು ಪರಿಶೀಲನೆ ಮಾಡದೆ ಇರಲಿಕ್ಕೆ ಸರ್ಕಾರಕ್ಕೆ ಬಂದಿರತಕ್ಕ ಅಡ್ಡಿ ಏನು?

*ಶ್ರೀ ಅಣ್ಣಾರಾವ್ ಗಣಮುಖಿ.—ಅಲ್ಲಲ್ಲಿ ಏನೇನು ಪದ್ಧತಿ ಇತ್ತೊ ಅದನ್ನೇ ಮುಂದುವರಿಸಿಕೊಂಡು ಬಂದಿದ್ದೇವೆ.

ಶ್ರೀ ಎಂ. ಎಂ. ಪಾಟೀಲ್.—ಫ್ರೀ ರಿಯಾಯಿತಿಯನ್ನು ಕೊಟ್ಟರೆ ಬಳ್ಳಾರಿ ಜಿಲ್ಲೆಯಿಂದ ಬರುತ್ತಿದ್ದ ಉತ್ಪನ್ನದಲ್ಲಿ ಎಷ್ಟು ಹಾನಿಯಾಗುತ್ತದೆಂದು ತಿಳಿಸುತ್ತೀರಾ?

ಶ್ರೀ ಅಣ್ಣಾರಾವ್ ಗಣಮುಖಿ.—ಬಳ್ಳಾರಿ ಜಿಲ್ಲೆಯಲ್ಲಿ ಪ್ರೈಮರಿ ವಿದ್ಯಾಭ್ಯಾಸವನ್ನು ಫ್ರೀ ಆಗಿ ಕೊಟ್ಟರೆ ಅದರಿಂದ ಸರ್ಕಾರಕ್ಕೆ 6,365 ರೂಪಾಯಿ ಹಾನಿಯಾಗುತ್ತದೆ.

Sri V. P. DEENADAYALU NAIDU.—How long would you like to perpetuate these dissimilarities, Sir? In some cases, they bring about uniformity; how long would you like to coutinue this dissimilarity? Is there any time-limit for that?

Sri ANNA RAO GANAMUKHI.—From the next year, curricullum is going to be uniform and the primary course will be of a duration of seven years. The Government contemplated that all these difficulties would be obviated by bringing uniformity in all the areas.

Dr. R. NAGAN GOWDA.—How can you expect emotional integration of people of Bellary with old Mysore, as long as you will not carry out the materiallistic integration?

Sri ANNA RAO GANAMUKHI.—Emotional integration has already taken place. If there is any difficulty they will be removed soon.

ಶ್ರೀ ಎಂ. ಎಂ. ಪಾಟೀಲ್.—1959ನೆಯ ಇಸವಿಯಿಂದ ಇಡೀ ರಾಜ್ಯದಲ್ಲಿರುವ ಎಲ್ಲ ಪ್ರೈಮರಿ ಮತ್ತು ಮಾಧ್ಯಮಿಕ ಶಾಲೆಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುತ್ತಾರೆಂದು ಪತ್ರಿಕೆಗಳಿಂದ ಗೊತ್ತಾಗಿದೆ. ಇದು ನಿಜವೇ?

ಶ್ರೀ ಅಣ್ಣಾರಾವ್ ಗಣಮುಖಿ.—ಹಾಗೆ ವಿಚಾರ ಸರ್ಕಾರ ಮಾಡಲಿಕ್ಕೆ ಹತ್ತಿದೆ. ಆದರೆ ಒತ್ತಾಯ ಪೂರ್ವಕವಾಗಿ ಪ್ರೈಮರಿ ಶಾಲೆಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದಿಲ್ಲ. ಅಲ್ಲಲ್ಲಿ ಜಿಲ್ಲಾ ಬೋರ್ಡ್ ಶಾಲೆಗಳು ಕೆಲಸಮಾಡುತ್ತಿವೆ. ಜಿಲ್ಲಾ ಬೋರ್ಡ್‌ಗಳ ಮನೂದೆ ಪಾಸಾದ ನಂತರ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಯೋಚನೆಮಾಡಿದೆ.

ಶ್ರೀ ಎಂ. ಎಂ. ಪಾಟೀಲ್.—ಕನಿಷ್ಠ ಪಕ್ಷ ಆರು ವರ್ಷಗಳಿರಾಗಾಯ್ತು, ಈ ಕಷ್ಟ ನಷ್ಟಗಳನ್ನು ಅನು

ಭವಿಸುತ್ತಿರುವ ಬಳ್ಳಾರಿ ಜಿಲ್ಲೆಯ ವಿಚಾರದಲ್ಲಿ ಮುಂದಿನ academic year ನಿಂದ ಮಾಫಿ ಮಾಡಲಿಕ್ಕೆ ಅವಕಾಶವಾಗುತ್ತದೆಯೇ ?

ಶ್ರೀ ಅಣ್ಣಾರಾವ್ ಗಣಮುಖಿ.—ಅವಕಾಶವಾಗುವಂತೆ ಅನ್ನಿಸುತ್ತದೆ. ನಾವು figures workout ಮಾಡುತ್ತಿದ್ದೇವೆ. ಫೀ ತೆಗೆದು ಹಾಕುವುದರಿಂದ ಸರ್ಕಾರಕ್ಕೆ ಎಷ್ಟು ಹಾನಿಯೊದಗುತ್ತದೆ ಮತ್ತು ಆ ಹಾನಿಯನ್ನು ಯಾವ ಪ್ರಕಾರ ತುಂಬಿಕೊಳ್ಳಬಹುದೆಂಬುದನ್ನು ಸರ್ಕಾರ ವಿಚಾರ ಮಾಡಲಿಕ್ಕೆ ಹತ್ತಿದೆ.

ಶ್ರೀ ಎಂ. ಎಂ. ಪಾಟೀಲ್.—ಆರು ಸಾವಿರ ರೂಪಾಯಿಗಳಿಂದ ಸರ್ಕಾರಕ್ಕೆ ಬಹಳ ದೊಡ್ಡ ಹಾನಿ ಬರತಕ್ಕ ಸಂದರ್ಭವಿದೆಯೇ ?

ಶ್ರೀ ಅಣ್ಣಾರಾವ್ ಗಣಮುಖಿ.—ಅದರೆ ಆರು ಸಾವಿರ ರೂಪಾಯಿ ಅಷ್ಟೇನೂ ತಮ್ಮ ಮೇಲೆ ವಜಿ ಆಗುತ್ತದೆಂದು ನನಗೆ ಅನ್ನಿಸುವುದಿಲ್ಲ.

Election Offences during the General Elections in Kolar District.

Q.—2028. **Sri A. MUNIYAPPA** (Chickballapur).—

Will the Government be pleased to state:—

(*a*) the number of cases registered in Kolar District pertaining to election offences committed during the recent General Elections;

(*b*) out of them, the number of cases in which culprits have been charge-sheeted (talukwise information may be furnished) ?

A.—**Sri T. SUBRAMANYA** (Minister Law, Labour and Local Government).—

(*a*) One case of election offence was registered in the Kolar Assembly constituency in Koar District.

(*b*) A charge-sheet has been filed in the above case.

ಶ್ರೀ ಎ. ಮುನಿಯಪ್ಪ.—ಕೋಲಾರ ಜಿಲ್ಲೆಯಲ್ಲಿ ಚುನಾವಣಾ ಸಂಬಂಧವಾಗಿ ಪೋಲೀಸ್ ಸ್ಟೇಷನ್‌ಗಳಲ್ಲಿ ಎಷ್ಟು ಕೇಸುಗಳು ರಿಜಿಸ್ಟರಾಗಿವೆ ?

Sri G. N. PUTTANNA.—I raise a point of order, Sir. It is said in the answer that the charge-sheet has been field in that case. Is it right to discuss the matter here ?

ಅಧ್ಯಕ್ಷರು.—ಎಲೆಕ್ಷನ್ ಸಂದರ್ಭಗಳಲ್ಲಿ ಪೋಲೀಸ್ ಸ್ಟೇಷನ್‌ಗಳಲ್ಲಿ ಎಷ್ಟು ಗುನ್ಹೆಗಳು ರಿಜಿಸ್ಟರಾಗಿವೆ ಎಂದು ಕೇಳಿದ್ದಾರೆ, ಅಷ್ಟೆ.

*ಶ್ರೀ ಟಿ. ಸುಬ್ರಹ್ಮಣ್ಯ.—ಅವರು ಕೇಳಿರುವ ಪ್ರಶ್ನೆ election offences ಮಾತ್ರ. ಇಂಥದ್ದು ಒಂದೇ ಒಂದು ಕೇಸು ರಿಜಿಸ್ಟರಾಗಿದೆ. ಇನ್ನೂ ಒಂದು ವಿಷಯವನ್ನು ತಿಳಿಸಬೇಕೆಂದಿದ್ದೇನೆ. ಪ್ರಶ್ನೆಗೆ ಉತ್ತರಗಳನ್ನು ಓದಗಿಸಿದಾಗ ಇನ್ನೂ ಕೇಸು ಇತ್ಯರ್ಥವಾಗಿರಲಿಲ್ಲ. ಈಗ ಅದು ಇತ್ಯರ್ಥವಾಗಿ ಅದರಲ್ಲಿ ಸಂಬಂಧಪಟ್ಟವರಿಗೆ ಕಠಿಣ ಶಿಕ್ಷೆ ಆಗಿದೆ.

ಶ್ರೀ ಎ. ಮುನಿಯಪ್ಪ.—ಕೇಸು ರಿಜಿಸ್ಟರ್ ಆದ ಮೇಲೆ 'ಬಿ' ರಿಪೋರ್ಟ್ ಕೊಟ್ಟಿರುವ ಕೇಸುಗಳೆಷ್ಟು ?

ಶ್ರೀ ಟಿ. ಸುಬ್ರಹ್ಮಣ್ಯ.—Election offence ವಿಷಯದಲ್ಲಿ ರಿಜಿಸ್ಟರ್ ಆಗಿರುವುದು ಇದೊಂದೇ ಕೇಸು.

ಶ್ರೀ ಎ. ಮುನಿಯಪ್ಪ.—ಹಾಗಿದ್ದಮೇಲೆ ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನಲ್ಲಿ ಖುನಿಯಾಗಿರುವ ಕೇಸು ಚುನಾವಣೆಗಳ ಸಂಬಂಧದ್ದು ಹೌದೋ ಅಲ್ಲವೋ ಸ್ವಾಮೀ ?

ಶ್ರೀ ಟಿ. ಸುಬ್ರಹ್ಮಣ್ಯ.—Election Offence ಅಲ್ಲ. ಚುನಾವಣೆಯ ಸಂಬಂಧದಲ್ಲಿ ಆಗಿರಬಹುದು.

Sri U. M. MADAPPA.—May I know whether these election offences were committed by the voter or candidate or his agent ?

Sri T. SUBRAMANYA.—It is by one of the voters.

Sri C. J. MUCKANNAPPA.—May I know in what constituency that this offence occurred, Sir ?

Sri T. SUBRAMANYA.—Polling Station No. 44 Narsapur, Kolar Assembly Constituency.

Sri C. J. MUCKANNAPPA.—May I know the nature of the offence that was committed ?

Sri T. SUBRAMANYA.—He has carried some ballot papers with him from outside. He was caught and punished.

Sri C. J. MUCKANNAPPA.—May I know the result of the case, Sir ?

Sri T. SUBRAMANYA.—He is punished for two offences with a sentence of rigorous imprisonment.

ಶ್ರೀ ಎ. ಮುನಿಯಪ್ಪ.—ನರಸಾಪುರದ ಕೇಸು ಎಂದು ಹೇಳಿದರು. ಅಲ್ಲಿ ಚುನಾವಣಾ ಸಂಬಂಧವಾಗಿ ಏನು ಅಕ್ರಮ ನಡೆಯುತ್ತಿರುವುದನ್ನು ಹೇಳುತ್ತಾರೆಯೇ ?

ಶ್ರೀ ಟಿ. ಸುಬ್ರಹ್ಮಣ್ಯ.—ವೆಂಕಟೇಗೌಡ ಎನ್ನುವವರು ವೋಟು ಮಾಡುವುದಕ್ಕೆ ಹೋದಾಗ ಹೊರಗಡೆಯಿಂದ ಕೆಲವು ವೋಟಿನ ಚೀಟಿಗಳನ್ನು ಜೇಬಿನಲ್ಲಿಟುಕೊಂಡು ಅವುಗಳನ್ನು ಪೆಟ್ಟಿಗೆಯಲ್ಲಿ ಹಾಕಬೇಕೆಂದಿದ್ದಾಗ ಅವರನ್ನು ಹಿಡಿದು ಅವರ ಮೇಲೆ ಕೇಸು ಹಾಕಿ ಅವರಿಗೆ ಶಿಕ್ಷೆಮಾಡಲಾಯಿತು.

ಶ್ರೀ ಎ. ಮುನಿಯಪ್ಪ.—ಇಂಥ ಸಂದರ್ಭಗಳು ಕೋಲಾರ ಜಿಲ್ಲೆಯಲ್ಲಿ ಇನ್ನೂ ಎಲ್ಲೆಲ್ಲಿ ನಡೆದುವೆಂಬುದನ್ನು ಹೇಳುತ್ತೀರಾ ?

ಶ್ರೀ ಟಿ. ಸುಬ್ರಹ್ಮಣ್ಯ.—ಇನ್ನೆಲ್ಲಯೂ ಕೇಸು ರಿಜಿಸ್ಟರಾಗಿಲ್ಲ.